ಅ) ಈ ಯೋಜನೆಯಂತೆ ನೀರು ಸಂಗ್ರಹಿಸುವ ಹಾಗೂ ವಿದ್ಯುತ್ ಉತ್ಪಾದನೆ ಮಾಡುವ ಪ್ರಮಾಣವೆಷ್ಟು,

ಇ) ಸದರಿ ನಿರ್ಮಾಣ ಕಾರ್ಯಕ್ಕಾಗಿ ಅಂದಾಜು ಮಾಡಿರುವ ವೆಚ್ಚವೆಷ್ಟು, ಹಾಗೂ ಎಂದಿನಿಂದ ಪ್ರಾರಂಭಿಸಲಾಗುವುದು

ಶ್ರೀ ಜೆ. ಹೆಚ್. ಪಟೇಲ್ (ಭಾರಿ, ಮಾಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು). —

ಅ) ಶರಾವತಿ ಟೇಲ್‌ರೇಸ್ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಜಮೀನಿನ ವಿಸ್ತೀರ್ಣ ೫೬೬ ಹೆಕ್ಟೇರುಗಳು, ಯಾವುದೇ ಖಾಸಗೀ ಪ್ರದೇಶ ಮುಳುಗಡೆಯಾಗುವುದಿಲ್ಲ.

ಆ) ಜಲಾಶಯದಲ್ಲಿ ನೀರು ಸಂಗ್ರಹವಾಗುವ ಪ್ರಮಾಣ ೧೨೬ ಮಿಲಿಯನ್ ಕ್ಯೂಬಿಕ್ ಮೀಟರ್‌ಗಳು ವರ್ಷಕ್ಕೆ ೬೧೯ ಮಿಲಿಯನ್ ಯೂನಿಟ್‌ಗಳು ವಿದ್ಯುತ್ ಉತ್ಪಾದನೆ ಮಾಡಬಹುದಾದ ಪ್ರತಿಯೊಂದು ೬೦ ಮೆಗಾವ್ಯಾಟ್ ಸಾಮರ್ಥ್ಯದ ನಾಲ್ಕು ಘಟಕಗಳು ಇರುತ್ತವೆ.

ಇ) ಈ ಯೋಜನೆಯ ಅಂದಾಜು ಮೊತ್ತ ರೂಪಾಯಿ ೨೧೨ ಕೋಟಿಗಳು, ಡೈವರ್ಷನ್ ಹಾಗೂ ಉಳಿದ ಅವಶ್ಯಕ ಪೂರ್ವಭಾವಿ ಕೆಲಸಗಳನ್ನು ಈ ವರ್ಷದಲ್ಲೇ ಪ್ರಾರಂಭಿಸುವ ನಿರೀಕ್ಷೆಯಿದೆ.

ಅರಣ್ಯ ಇಲಾಖೆಯ ಭೂಮಿಯಲ್ಲಿ ಕೃಷಿ ಮಾಡುವುದು

೭೨೩. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ತನ್ನದೆಂದು ತಿಳಿದಿರುವ ಸುಮಾರು ೩೦೦ ಎಕರೆ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ರೈತರು ಕೃಷಿಮಾಡಿ ಕಟಾವು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಅರಣ್ಯಾಧಿಕಾರಿಗಳಿಗೂ ಮತ್ತು ರೈತರಿಗೂ ಈ ಬಗ್ಗೆ ಒಂದೇ ಸಮನಾಗಿ ಘರ್ಷಣೆ ನಡೆಯುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಇ) ಈ ಬಗ್ಗೆ ರೈತರಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು

ಆ) ಹೌದು

ಇ) ಅರಣ್ಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಂದ ಜಂಟೀ ಸರ್ವೆಯೊಂದು ನಡೆದಿದ್ದು ಈಗಾಗಲೇ ಗುರುತಿಸಲಾದ ಕಾದಿಟ್ಟ ಅರಣ್ಯ ಪ್ರದೇಶವನ್ನು ಗುರುತಿಸಿದ ನಂತರ ಈಗಾಗಲೇ ಕೃಷಿ ಮಾಡುತ್ತಿರುವ ಪ್ರದೇಶವು ಕಾದಿಟ್ಟ ಅರಣ್ಯ ಪ್ರದೇಶದ ಹೊರಭಾಗದಲ್ಲಿದ್ದರೆ ಈ ವಿವಾದವನ್ನು ನಿತ್ಯರ್ಥಗೊಳಿಸಲಾಗುವುದು.

ಪಶು ಚಿಕಿತ್ಸಾಲಯದ ಬಗ್ಗೆ

೭೩೬. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).— ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿತ್ತಾಪುರ ತಾಲ್ಲೂಕಿನಲ್ಲಿ ಕೊಲ್ಲೂರು ಗ್ರಾಮವು ಅತೀ ದೊಡ್ಡ ಗ್ರಾಮವಾಗಿದ್ದುದರಿಂದ ಪಶು ಚಿಕಿತ್ಸಾಲಯವು ಅವಶ್ಯಕವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸದರಿ ಗ್ರಾಮದ ಜನತೆಯು ಪಶು ಚಿಕಿತ್ಸಾಲಯಕ್ಕೆ ಸರ್ಕಾರದವರಿಗೆ ಬೇಡಿಕೆಯಿನ್ನೇನಾದರೂ ಇಟ್ಟಿರುವರೆ ?